ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 28–4–2015

# ಪತ್ರಿಕಾ ಆಮಂತ್ರಣ

| | | | |
|---|---|---|---|
| 1 | ಕನ್ನಡ ಅಭಿವೃದ್ಧಿ ಪ್ರಾಧಿಕಾರ ಡಾ: ಸರೋಜಿನಿ ಮಹಿಷಿ ವರದಿ ಅನುಷ್ಠಾನ ಸಂಬಂಧಿಸಿದಂತೆ ಬ್ಯಾಂಕುಗಳು ಮತ್ತು ವಿಮಾ ಸಂಸ್ಥೆಗಳಿಗೆ ಭೇಟಿ ಹಾಗೂ ಪರಿಶೀಲನೆ<br><br>ಸಂಪರ್ಕ:<br>ಕೆ. ಮುರಳೀಧರ<br>9880044467 | 29–04–2015<br>ಬುಧವಾರ<br>ಬೆಳಿಗ್ಗೆ<br>10–30 ಗಂಟೆಗೆ<br><br>29–04–2015<br>ಬುಧವಾರ<br>ಮಧ್ಯಾಹ್ನ<br>12–30 ಗಂಟೆಗೆ<br><br>29–04–2015<br>ಬುಧವಾರ<br>ಮಧ್ಯಾಹ್ನ<br>2–30 ಗಂಟೆಗೆ<br><br>29–04–2015<br>ಬುಧವಾರ<br>ಸಂಜೆ<br>4–00 ಗಂಟೆಗೆ | ಗಾಂಧೀನಗರದಲ್ಲಿರುವ ಸಿಂಡಿಕೇಟ್ ಬ್ಯಾಂಕ್<br><br>ಜೆ.ಸಿ. ರಸ್ತೆಯಲ್ಲಿರುವ ಕೆನರಾ ಬ್ಯಾಂಕ್<br><br>ಪಿ. ಕಾಳಿಂಗರಾವ್ ರಸ್ತೆಯಲ್ಲಿರುವ ನ್ಯೂ ಇಂಡಿಯಾ ಇನ್ಸೂರೆನ್ಸ್ ಕಂಪನಿ<br><br>ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ<br>ಸೇಂಟ್ ಮಾರ್ಕ್ಸ್ ರಸ್ತೆ,<br>ಬೆಂಗಳೂರು |

| | | | |
|---|---|---|---|
| 2 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ : ಪ್ರಾದೇಶಿಕ ಕಚೇರಿ.<br><br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br><br>ಉಪಸ್ಥಿತಿ:<br><br>ಶ್ರೀ ಆರ್. ವಿ. ದೇಶಪಾಂಡೆ,<br>ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು.<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು ಹಾಗೂ ಬೆಂಗಳೂರು ನಗರ ಉಸ್ತುವಾರಿ ಸಚಿವರು<br><br>ಅಧ್ಯಕ್ಷತೆ:<br><br>ಡಾ. ಹೆಚ್. ಮಹೇಶಪ್ಪ,<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,<br>ಬೆಳಗಾವಿ | 29–04–2015<br>ಬುಧವಾರ<br>ಸಂಜೆ<br>4–00 ಗಂಟೆಗೆ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,<br>ಆರ್.ಹೆಚ್.ಸಿ.ಎಸ್. ಬಡಾವಣೆ,<br>ಅನ್ನಪೂರ್ಣೇಶ್ವರಿ ನಗರ,<br>ನಾಗರಭಾವಿ,<br>ಬೆಂಗಳೂರು – 560 091 |

ನಿರ್ದೇಶಕರ ಪರವಾಗಿ

## ಮಾಧ್ಯಮದವರ ಗಮನಕ್ಕೆ

ಬೆಂಗಳೂರು ಮೆಟ್ರೋ ರೈಲು ನಿಗಮವು ಮೇ 1 ರಂದು ಸಾರ್ವಜನಿಕರ ಸಂಚಾರಕ್ಕಾಗಿ ಮೆಟ್ರೋ ಮಾರ್ಗ – 3 ಬಿ ಯನ್ನು ಲೋಕಾರ್ಪಣೆ ಮಾಡಲಿದೆ.

ಅಂದು ಬೆಳಿಗ್ಗೆ 9–45 ಕ್ಕೆ ನಾಗಸಂದ್ರ ಮೆಟ್ರೋ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ನಗರಾಭಿವೃದ್ಧಿ ಸಚಿವ ವೆಂಕಯ್ಯನಾಯ್ಡು, ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ರೈಲಿಗೆ ಚಾಲನೆ ನೀಡಲಿದ್ದಾರೆ.

ಸದರಿ ಕಾರ್ಯಕ್ರಮದ ವರದಿಗೆ ಆಗಮಿಸುವ ಮಾಧ್ಯಮ ಪ್ರತಿನಿಧಿಗಳು ತಮ್ಮ ಸಂಸ್ಥೆಯ ಸುದ್ದಿ ಮುಖ್ಯಸ್ಥರ ಶಿಫಾರಸ್ಸು ಪತ್ರದೊಂದಿಗೆ ವಾರ್ತಾ ಇಲಾಖೆಯ ಸುದ್ದಿ ಮತ್ತು **ಪತ್ರಿಕಾ ಶಾಖೆಯಲ್ಲಿ ದಿನಾಂಕ *29-4-2015 ರಂದೇ* ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 5-00 ಗಂಟೆಯೊಳಗೆ ಪಾಸ್ ಮತ್ತು ಆಹ್ವಾನ ಪತ್ರಿಕೆಯನ್ನು ಪಡೆಯಲು ಕೋರಿದೆ.**

**ಪತ್ರಿಕಾ ಪ್ರಕಟಣೆ**

## ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉಚಿತ ತರಬೇತಿಗಳ ಪ್ರಯೋಜನ ಪಡೆಯಬೇಕು

**-ಸಚಿವ ಆಂಜನೇಯ**

**ಬೆಂಗಳೂರು, ಏಪ್ರಿಲ್ 28 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಿಸಿಎಂ ಇಲಾಖೆ ವತಿಯಿಂದ ಸಾಕಷ್ಟು ತರಬೇತಿ ಕಾರ್ಯಕ್ರಮಗಳನ್ನು ತರಬೇತಿ ಕೇಂದ್ರಗಳ ಮೂಲಕ ಹಮ್ಮಿಕೊಳ್ಳಲಾಗಿದ್ದು, ವಿದಾರ್ಥಿಗಳು ಇದರ ಸದುಪಯೋಗಪಡಿಸಿಕೊಳ್ಳುವಂತೆ, ಅದರಲ್ಲೂ ಹೆಣ್ಣುಮಕ್ಕಳು ಹೆಚ್ಚು ಕ್ರಿಯಾಶೀಲರಾಗಿ ತರಬೇತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಸಮಾಜ ಕಲ್ಯಾಣ ಇಲಾಖೆ ಸಚಿವ ಶ್ರೀ ಹೆಚ್. ಆಂಜನೇಯ ಅವರು ಕರೆ ಕೊಟ್ಟರು.

ಅವರಿಂದು ನಗರದ ದೇವರಾಜು ಅರಸು ಭವನದಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗಾಗಿ ಏರ್ಪಡಿಸಲಾಗಿದ್ದ 'ಆನ್‌ಲೈನ್ ಬ್ಯಾಂಕಿಂಗ್ ಪರೀಕ್ಷಾಪೂರ್ವ ಉಚಿತ ತರಬೇತಿ 'ಕಾರ್ಯಕ್ರಮ ಉದ್ಘಾಟಿಸಿ ಮಾತನ್ನಾಡುತ್ತಾ, ಸಮಾಜಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಾಗಿ ಉನ್ನತ ವ್ಯಾಸಂಗ ಮಾಡಲು ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ. ಐಎಎಸ್ ಹಾಗೂ ಕೆಎಎಸ್ ಪರೀಕ್ಷೆ ಎದುರಿಸಲು ಲಕ್ಷಾಂತರ ಖರ್ಚು ಮಾಡಿ ಅಭ್ಯರ್ಥಿಗಳನ್ನು ಹೊರರಾಜ್ಯಗಳಿಗೆ ಕಳುಹಿಸಲಾಗುತ್ತಿದೆ. ಆದರೂ ತೃಪ್ತಿಕರ ಫಲಿತಾಂಶ ಹೊರಬೀಳುತ್ತಿಲ್ಲ. ಹೊರರಾಜ್ಯದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗುತ್ತಿದ್ದು, ನಮ್ಮ ರಾಜ್ಯದ ಅಭ್ಯರ್ಥಿಗಳೂ ಸಹ ಈ ನಿಟ್ಟಿನಲ್ಲಿ ಮತ್ತಷ್ಟು ಪರಿಶ್ರಮ ಪಡುವಂತೆ ಕರೆ ನೀಡಿದರು.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಸಕ್ತಿಯಿರುವಂತಹ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಬ್ಯಾಂಕಿಂಗ್ ಪರೀಕ್ಷೆ ಎದುರಿಸಲು ಹಾಗೂ ಆತ್ಮವಿಶ್ವಾಸ ತುಂಬಲು ಉಚಿತ 'ಆನ್‌ಲೈನ್ ಬ್ಯಾಂಕಿಂಗ್ ಪರೀಕ್ಷಾಪೂರ್ವ ತರಬೇತಿ ' ಕಾರ್ಯಕ್ರಮ ಜಾರಿಗೆ ತರಲಾಗಿದ್ದು, ಹಿಂದುಳಿದ ವರ್ಗಗಳ ಅಭ್ಯಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿ ನಿಷ್ಠೆಯಿಂದ ಅಭ್ಯಾಸ ಮಾಡುವ ಮೂಲಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಯಶಸ್ಸು ಸಾಧಿಸುವಂತೆ ಸಮಾಜ ಕಲ್ಯಾಣ ಸಚಿವ ಆಂಜನೇಯ ಅವರು ಕರೆ ನೀಡಿದರು.

ನಮ್ಮ ಯುವಜನಾಂಗ  ಓದುವ ವಯಸ್ಸಿನಲ್ಲಿ ಓದುವ ಕಡೆಗಷ್ಟೇ ಗಮನ ನೀಡಬೇಕು. ಇತರೆ ಆಕರ್ಷಣೆಗಳ ಕಡೆಗೆ ಗಮನ ನೀಡದೆ ಓದಿನಲ್ಲಿ ತಲ್ಲೀನರಾಗಬೇಕು. ಜೀವನದಲ್ಲಿ ಉನ್ನತ ಅಧಿಕಾರಿಗಳಾಗಬೇಕು  ಎಂದು ಗುರಿ ಇಟ್ಟುಕೊಂಡು ಆ ನಿಟ್ಟಿನಲ್ಲಿ ಅಭ್ಯಾಸದಲ್ಲಿ ತೊಡಗಬೇಕು, ಬದುಕಿನಲ್ಲಿ ನೆಲೆ ನಿಂತ ನಂತರವಷ್ಟೇ ಸಂಗಾತಿ ಬಗ್ಗೆ ಯೋಚಿಸಬೇಕು ಎಂದು ಸಚಿವರು ಈ ಸಂದರ್ಭ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬರುವ ವರ್ಷ ವಿದ್ಯಾಸಿರಿ 75 ಸಾವಿರ ಫಲಾನುಭವಿಗಳಿಗೆ ವಿಸ್ತರಣೆ ಚಿಂತನೆ:

ರಾಜ್ಯ ಸರ್ಕಾರ ನಮ್ಮ ಯುವಜನಾಂಗಕ್ಕೆ  ಉತ್ತಮ ಶಿಕ್ಷಣ ಒದಗಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು ,  ನಮ್ಮ ಮಕ್ಕಳಿಗೆ  ಉತ್ತಮ ಶಿಕ್ಷಣ ನೀಡಲು ಉಚಿತ ವಸತಿ ಸಹಿತ ಉಚಿತ  ಊಟ, ಪುಸ್ತಕ ಸೇರಿದಂತೆ ಎಲ್ಲಾ ಸೌಲಭ್ಯ ನೀಡುತ್ತಿದೆ, ಈ ನಿಟ್ಟಿನಲ್ಲಿ ವಿದ್ಯಾಸಿರಿ ಯೋಜನೆಯೂ ಒಂದಾಗಿದೆ. ಪ್ರಸ್ತುತ ಸಾಲಿನಲ್ಲಿ ಸುಮಾರು 75 ಸಾವಿರ ಫಲಾನುಭವಿಗಳಿಗೆ ಯೋಜನೆ ವಿಸ್ತರಿಸುವ ಉದ್ದೇಶವಿದೆ ಎಂದರು.

ನಮ್ಮ ಯುವಜನಾಂಗದ ಭವಿಷ್ಯದ ಮೇಲೆ ರಾಜ್ಯದ ಭವಿಷ್ಯ ನಿಂತಿದೆ.  ಆದ್ದರಿಂದ ಯುವಜನಾಂಗ ಉನ್ನತ  ಸಾಧನೆ ಮಾಡುವ ಗುರಿ ಹೊಂದುವ ಮೂಲಕ ರಾಜ್ಯದ ಭವ್ಯ ಭವಿಷ್ಯಕ್ಕೆ ಕಾರಣೀಕರ್ತರಾಗುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಪ್ರಧಾನಕಾರ್ಯದರ್ಶಿ  ಶಾಲಿನಿ ರಜನೀಶ್ ಕೆನರಾ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕ ರಾವತ್, ರೊಟೇರಿಯನ್ ಮಂಜುನಾಥ್ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಪಲ್ಲವಿ/ಮಮತ/

## ಗಣಕಿಕರಣ ಕೇಂದ್ರಕ್ಕೆ ಹಿಂದುಳಿದ ವರ್ಗದ ಆಯೋಗದ ಸದಸ್ಯರ ಭೇಟಿ

**ಬೆಂಗಳೂರು, ಏಪ್ರಿಲ್ 28 (ಕರ್ನಾಟಕ ವಾರ್ತೆ)**

**ಚಿಕ್ಕಮಗಳೂರು ತಾಲ್ಲೂಕಿನ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಮಾಹಿತಿ ಗಣಕಿಕರಣ ಕೇಂದ್ರಕ್ಕೆ ರಾಜ್ಯ ಹಿಂದುಳಿದ ವರ್ಗದ ಆಯೋಗ ಸದಸ್ಯ ಕೆ.ಎನ್. ಲಿಂಗಪ್ಪ ಅವರು ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು.**

**ಅವರು ಇಂದು ನಗರದ ಬೇಲೂರು ರಸ್ತೆಯ  ಸಮಾಜ ಕಲ್ಯಾಣ ಇಲಾಖೆಯ ನೂತನ ವಿದ್ಯಾರ್ಥಿ ನಿಲಯದಲ್ಲಿ  ನಡೆಯುತ್ತಿದ್ದ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಗಣಕಿರಣ ಕೇಂದ್ರದಲ್ಲಿ ಪ್ರಗತಿ**

ಕಾರ್ಯಗಳ ಮಾಹಿತಿಯನ್ನು ಪರಿಶೀಲಿಸಿ ಮಾಹಿತಿ ಕ್ರೋಢೀಕರಿಸಿದ ಅರ್ಜಿಗಳನ್ನು ಕ್ರಮಬದ್ಧವಾಗಿ ವಾರ್ಡ್‍ವಾರು, ಬ್ಲಾಕ್‍ವಾರು, ಜೋಡಣೆಯಾಗುತ್ತಿದ್ದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳು ಗಣಕೀಕರಣಗೊಳಿಸಿದ್ದಕ್ಕೆ ಕೆಲವು ಅರ್ಜಿಗಳನ್ನು ಮರುಪರಿಶೀಲನೆ ಮಾಡಿ, ಸರಿಯಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಂಡ ಅವರು ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಯಾವುದೇ ರೀತಿಯ ತಪ್ಪುಗಳಿಲ್ಲದೇ ಗಣಕೀಕರಣಗೊಳಿಸಲು ಸೂಚನೆ ನೀಡಿದರು.

ಆಯೋಗದ ಸದಸ್ಯರೊಂದಿಗೆ ಜಿಲ್ಲಾಧಿಕಾರಿ ಬಿ.ಎಸ್. ಶೇಖರಪ್ಪ, ಅಪರ ಜಿಲ್ಲಾಧಿಕಾರಿ ಎಂ.ಎಲ್. ವೈಶಾಲಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಶಿವಮೊಗ್ಗ – ಚಿಕ್ಕಮಗಳೂರು ನೋಡಲ್ ಅಧಿಕಾರಿ ಕೆ. ಚನ್ನಬಸಪ್ಪ, ಜಿಲ್ಲಾ ಹಿಂದುಳಿದ ವರ್ಗದ ಹಿರಿಯ ಅಧಿಕಾರಿಗಳು ಸೇರಿದಂತೆ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಛಾಯಾಚಿತ್ರ ಶೀರ್ಷಿಕೆ:

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಗಣಕೀಕೃತ ಕೇಂದ್ರಕ್ಕೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕೆ.ಎನ್. ಲಿಂಗಪ್ಪ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚಿಕ್ಕಮಗಳೂರು ಜಿಲ್ಲಾಧಿಕಾರಿ ಬಿ.ಎಸ್. ಶೇಖರಪ್ಪ, ಅಪರ ಜಿಲ್ಲಾಧಿಕಾರಿ ಎಂ.ಎಲ್. ವೈಶಾಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಚಿಕ್ಕಮಗಳೂರು ಮತ್ತು ಶಿವಮೊಗ್ಗ ನೋಡೆಲ್ ಅಧಿಕಾರಿ ಕೆ. ಚನ್ನಬಸಪ್ಪ ಹಾಗೂ ಮತ್ತಿತರರು ಉಪಸ್ಥಿತರಿದ್ದರು.